**ಸಾಕ್ಷಿಗೆ ದಿನಾಂಕಃ 16.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.BSB ರವರಿಂದಃ**

1) ನಾನು ಈ ಪ್ರಕರಣದಲ್ಲಿ ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) **ಪ್ರಥಮ ವರ್ತಮಾನ ವರದಿ** ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, **ಪೋಲಿಸರಿಗೆ ನೀಡಿರುವ ದೂರನ್ನು ನಿ.ಪಿ.2** ಎಂದು, ಮತ್ತು ಅಂತಿಮ ವರದಿಯನ್ನು ನಿ.ಪಿ.**3** ಎಂದು, ಅಪರಾಧ ವಿವರ ನಮೂನೆಯನ್ನು ನಿ.ಪಿ.**4** ಎಂದು, ಮತ್ತು ಗಾಯದ ಪ್ರಮಾಣ ಪತ್ರವನ್ನು ನಿ.ಪಿ.**5** ಎಂದು, ಐಎಂವಿ ವರದಿಯನ್ನು ನಿ.ಪಿ.**6** ಎಂದು ಗುರುತಿಸಿದೆ.

3) **ಐ.ಎಂ.ವಿ ಕಾಯ್ದೆ ಕಲಂ 133** ರ ಅಡಿಯಲ್ಲಿ ನೀಡಿರುವಂತಹ **ನೋಟಿಸ್** ಅನ್ನು ನಿ.ಪಿ.**7** ಎಂದು ಮತ್ತು **ಆ ನೋಟಿಸಿಗೆ ನೀಡಿರುವಂತಹ ಉತ್ತರವನ್ನು** ನಿ.ಪಿ.**8** ಎಂದು ಗುರುತಿಸಿದೆ.

**<u>ಸೂಚನೆಃ</u>** ನಿ.ಪಿ.1 ರಿಂದ ನಿ.ಪಿ.8 ಎಂದು ಗುರುತು ಆಗಿರುವ ದಾಖಲೆಗಳು ಮಂಡ್ಯ ಜಿಲ್ಲೆಯ ಕೆಸ್ತೂರು ಪೋಲಿಸ್ ಠಾಣೆಯವರು ನೀಡಿರುವಂತಹ ಯಥಾ ನಕಲುಗಳು ಆಗಿವೆ.

4) **ಡಿಸ್ಚಾರ್ಜ್ ಸಮ್ಮರಿ ಅನ್ನು** ನಿ**.**ಪಿ**.9** ಎಂದು ಗುರುತಿಸಿದೆ**.**

5) ಒಟ್ಟು **75** ಮೆಡಿಕಲ್ **Prescriptions** ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ**.**ಪಿ**.10** ಎಂದು**,** ಮತ್ತು ಒಟ್ಟು **109** ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ**.**ಪಿ**.11** ಎಂದು ಗುರುತಿಸಿದೆ**.**

6) ಒಟ್ಟು **5** ಫೋಟೋಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ**.**ಪಿ**.12** ರಿಂದ ನಿ**.**ಪಿ**.16** ಎಂದು ಗುರುತಿಸಿದೆ ಮತ್ತು ಒಂದು ಸಿ**.**ಡಿ**.** ಅನ್ನು ನಿ**.**ಪಿ**.17** ಎಂದು ಗುರುತಿಸಿದೆ**.**

7) ಈಗ ಸಾಕ್ಷಿದಾರರು ತಮ್ಮ ಮೂಲ ಆಧಾರ್ ಕಾರ್ಡ್ ದಾಖಲೆ ಮತ್ತು ಇದೇ ದಾಖಲೆಯ ನೆರಳಚ್ಚು **(photo copy)** ಪ್ರತಿಯನ್ನು ಹಾಜರುಪಡಿಸಿದ್ದಾರೆ**.** ಸದರಿ ಮೂಲ ಪ್ರತಿಯನ್ನು ಮತ್ತು ನೆರಳಚ್ಚು ಪ್ರತಿಯನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಯನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ನೆರಳಚ್ಚು

ಪ್ರತಿಯನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ನೆರಳಚ್ಚು ಪ್ರತಿಯನ್ನು ನಿ.ಪಿ.**18** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಯನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

8) ಆದ ಕಾರಣದಿಂದ ಪ್ರಾರ್ಥನೆಯಂತೆ ನನಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಿಂದಃ**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ ಮತ್ತು ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಿಂದಃ**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.